ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

5

ಇಲಾಖೆ / ವಿಷಯ : DEPARTMENT / SUBJECT: ಕಂದಾಯ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 8/7/2020

# ಲೀಸ್ ನೀಡಿದ್ದ ಸರ್ಕಾರಿ ಜಮೀನು ಮಾರಾಟ

## ಧನ ಸಂಗ್ರಹಕ್ಕೆ ರಾಜ್ಯ ಸರ್ಕಾರ ಮಹತ್ವದ ನಿರ್ಧಾರ
## ಮಾರಾಟ ಮಾಡುವ ಅಧಿಕಾರ ಸ್ಥಳೀಯ ಸಂಸ್ಥೆಗಳಿಗೆ

**ದರ ಹೇಗೆ?**

**1** ಗುತ್ತಿಗೆ ಪಡೆದ ಸಂಸ್ಥೆ ತಾನು ಪಡೆದ ಉದ್ದೇಶಕ್ಕೆ ಕಾಯಂ ಮಂಜೂರಾತಿ ಕೋರಿದರೆ ಮಾರ್ಗಸೂಚಿ ದರ

**2** ಗುತ್ತಿಗೆ ಪಡೆದ ಸಂಸ್ಥೆ ಅನ್ಯ ಉದ್ದೇಶಕ್ಕೆ ಕಾಯಂ ಮಂಜೂರಾತಿ ಕೋರಿದರೆ ಮಾರ್ಗಸೂಚಿಯ 2 ಪಟ್ಟು ದರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ಕೊರೋನಾ ಲಾಕ್‌ಡೌನ್ ಕಾರಣ ಹದಗೆಟ್ಟಿದ್ದ ರಾಜ್ಯದ ಆರ್ಥಿಕ ಸ್ಥಿತಿ ಸುಧಾರಣೆಗೆ 'ಟಾನಿಕ್' ನೀಡಲು ರಾಜ್ಯ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದೆ. ವಿವಿಧ ಕಾರಣಗಳಿಗೆ ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ (ಲೀಸ್) ಆಧಾರದ ಮೇಲೆ ನೀಡಿದ್ದ ಭೂಮಿಯನ್ನು ಇಂದಿನ ಮಾರ್ಗಸೂಚಿ ದರದ ಮೇಲೆ ಕಾಯಂ ಆಗಿ ಮಾರಾಟ ಮಾಡುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಹಿಂದಿನ ಸಚಿವ ಸಂಪುಟದಲ್ಲಿ ತೆಗೆದುಕೊಂಡ ನಿರ್ಧಾರದ ಅನ್ವಯ ಕಂದಾಯ ಇಲಾಖೆ ಮಂಗಳವಾರ ಈ ಆದೇಶ ಹೊರಡಿಸಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಉತ್ತಮ ಸಂಪನ್ಮೂಲ ಹರಿದುಬರುವ ನಿರೀಕ್ಷೆಯಿದೆ.

↘ 8

# ಲೀಸ್ ನೀಡಿದ್ದ ಸರ್ಕಾರಿ ಜಮೀನು ಮಾರಾಟ

↙ ಮೊದಲ ಪುಟದಿಂದ

ಖಾಸಗಿ ಸಂಘ ಸಂಸ್ಥೆಗಳಿಗೆ ಸರ್ಕಾರವು ಕೈಗಾರಿಕೆ, ಶೈಕ್ಷಣಿಕ, ಕಲ್ಯಾಣ ಮಂಟಪ ಚಟುವಟಿಕೆಗಳು, ಧಾರ್ಮಿಕ, ಕೃಷಿ ಮತ್ತು ಕೃಷಿಯೇತರ ಉದ್ದೇಶಗಳಿಗಾಗಿ ಈ ಹಿಂದೆಯೇ 'ಕರ್ನಾಟಕ ಭೂ ಮಂಜೂರಾತಿ ನಿಯಮ 1990ರ ನಿಯಮ 19'ರ ಅನ್ವಯ ಸರ್ಕಾರಿ ಜಮೀನನ್ನು ಗುತ್ತಿಗೆ ನೀಡಿದೆ. ಸರ್ಕಾರಿ ಜಮೀನುಗಳನ್ನು ಗುತ್ತಿಗೆ ಪಡೆದ ಸಂಸ್ಥೆಯು ತಾನು ಪಡೆದ ಉದ್ದೇಶಕ್ಕೆ ಕಾಯಂ ಮಂಜೂರಾತಿ ಕೋರಿದ್ದಲ್ಲಿ, ಪ್ರಸ್ತುತ ಮಾರ್ಗಸೂಚಿ ಮೌಲ್ಯವನ್ನು ವಿಧಿಸಬೇಕು.

ಒಂದು ವೇಳೆ ಗುತ್ತಿಗೆ ಪಡೆದ ಭೂಮಿಯನ್ನು ಅನ್ಯ ಉದ್ದೇಶಕ್ಕೆ ಮಂಜೂರಾತಿ ಕೋರಿದ್ದಲ್ಲಿ ಮಾರ್ಗಸೂಚಿ ಮೌಲ್ಯದ ಎರಡು ಪಟ್ಟು ಮೊತ್ತವನ್ನು ವಿಧಿಸಿ ಒಂದು ಬಾರಿಗೆ ಅನ್ವಯ ಆಗುವಂತೆ ಕಾಯಂ ಆಗಿ ಮಂಜೂರು ಮಾಡುವಂತೆ ಆದೇಶಿಸಲಾಗಿದೆ.

ಒಂದು ವೇಳೆ ಗುತ್ತಿಗೆ ನೀಡಲಾಗಿರುವ ಜಮೀನುಗಳನ್ನು ಕಾಯಂ ಮಂಜೂರಾತಿ ಪಡೆಯಲು ಗುತ್ತಿಗೆ ಪಡೆದ ಸಂಸ್ಥೆ ಇಚ್ಛಿಸದಿದ್ದಲ್ಲಿ ಅಂತಹ ಗುತ್ತಿಗೆ ಜಮೀನುಗಳನ್ನು ಸ್ಥಳ ಪರಿವೀಕ್ಷಣೆ ನಡೆಸಿ, ಉಪಯೋಗಿಸದೇ ಖಾಲಿ ಉಳಿಸಲಾಗಿರುವ ಭೂಮಿಗಳನ್ನು ಪುನಃ ಸರ್ಕಾರದ ವಶಕ್ಕೆ ಪಡೆಯಲು ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ.

**30 ವರ್ಷದ ಗುತ್ತಿಗೆ:** ರಾಜ್ಯ ಸರ್ಕಾರ ವಿವಿಧ ಉದ್ದೇಶಗಳಿಗಾಗಿ ಸರ್ಕಾರಿ ಜಮೀನುಗಳನ್ನು ರಾಜ್ಯದ ಹಲವಾರು ಸಂಘ-ಸಂಸ್ಥೆಗಳಿಗೆ 30 ವರ್ಷದ ಅವಧಿಗೆ ಗುತ್ತಿಗೆ ನೀಡುತ್ತಾ ಬಂದಿದೆ. ಗುತ್ತಿಗೆ ಅವಧಿ ಮುಗಿದ ನಂತರ ಕೋರಿಕೆಯ ಮೇರೆಗೆ ಇನ್ನು 5 ವರ್ಷ ಕಾಲ ವಿಸ್ತರಿಸಲು ಜಿಲ್ಲಾಧಿಕಾರಿಗೆ ಅಧಿಕಾರವಿರುತ್ತಿತ್ತು. ಈಗ ಗುತ್ತಿಗೆ ಜಮೀನನ್ನು ಕಾಯಂ ಆಗಿ ನೀಡುವಂತೆ ಯಾರಾದರೂ ಅರ್ಜಿ ಸಲ್ಲಿಸಿದರೆ ಅವರಿಗೆ ಹಾಲಿ ಮಾರ್ಗಸೂಚಿ ದರದ ಮೇಲೆ ಕಾಯಂ ಆಗಿ ಮಂಜೂರು ಮಾಡಲು ಆದೇಶ ಹೊರಡಿಸಲಾಗಿದೆ.